**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 101/2018**

| | | | |
|---|---|---|---|
| **ಹೆಸರು** | **:** | **ಮಂಜುನಾಥ** | **ಚಾ.ಸಾ.19** |
| **ತಂದೆಯ ಹೆಸರು** | **:** | **ನಾಗಣ್ಣ** | **ಪ್ರಾ.ಸಾ.13** |
| **ವಯಸ್ಸು** | **:** | **40 ವರ್ಷ** | **ದಿನಾಂಕಃ 30-10-2023** |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ರಾಯಕೊಡ್** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಚಾಸಾ-1 ಮತ್ತು 13 ರವರು ನನಗೆ ಗೊತ್ತು. ಈಗ ನೊಡುತ್ತಿರುವ ನಿಪಿ-8 ರಲ್ಲಿರುವ ಸಹಿ ನನ್ನದೆ. ನನ್ನ ಸಹಿಯನ್ನು ನಿಪಿ-8 (ಬಿ)ಎಂದು ಗುರುತಿಸಲಾಯಿತು. ಪೋಲಿಸರು ರಾಯಕೊಡದಲ್ಲಿ ಬಂದಾಗ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ. ಪೋಲಿಸರುನನ್ನ ಸಮಕ್ಷಮ ಯಾವುದೇ ವಸ್ತುವನ್ನು ಜಪಿಪ್ತ ಮಾಡಿಕೊಂಡಿಲ್ಲ. ಈಗ ನೋಡುತ್ತಿರುವ ನಿಪಿ-4 ರ ಭಾವಚಿತ್ರದಲ್ಲಿ ನಾನು ಇದ್ದೆನೆ. ನಿಪಿ-4 ರ ಭಾವಚಿತ್ರವನ್ನು ಪೋಲಿಸರು ನಿಪಿ-8 ರಲ್ಲಿ ನನ್ನ ಸಹಿ ಪಡೆದುಕೊಳ್ಳುವ ದಿನಾಂಕದಂದು ಪಡೆದುಕೂಂಡಿದ್ದಾರೆ. ನನ್ನ ಸಹಿಯನ್ನು ರಸ್ತೆ ಹತ್ತಿರ ಪಡೆದುಕೊಂಡಿದ್ದಾರೆ. ನಿಪಿ-4 ರ ಭಾವಚಿತ್ರವನ್ನು ಪ್ರಾಸಾ 3 ರವರ ಮನೆಯಲ್ಲಿ ಪಡೆದುಕೊಂಡಿದ್ದಾರೆ. ಒಡನಿ ಕೊಡುವ ಸಮಕ್ಕೆ ನನಗೆ ಕರೆದು ಭಾವಚಿತ್ರವನ್ನು ಪಡೆದಿದ್ದಾರೆ. ನಿಪಿ-4 ರ ಭಾವಚಿತ್ರದಲ್ಲಿರುವ ಒಡನಿ ಹಾಗೂ ಮು.ಮಾ 1 ಒಂದೇ ಇರುತ್ತದೆ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎಸ್.ಬಿ.ಕೆ. ವಕೀಲರಿಂದಃ-</u>**

ಪೋಲಿಸರು ನನ್ನ ಸಹಿ ಕಾಲಿ ಕಾಗದದಲ್ಲಿ ಪಡೆದುಕೊಂಡಿದ್ದಾರೆ ಹಾಗೂ ಅದರಲ್ಲಿರುವ ಸಂಗತಿಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಯಾವ ಪ್ರಕರಣಕ್ಕೆ ಸಂಬಂದಪಟ್ಟಂತೆ ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ ಸರಿ. ನಾನು ಸಹಿ ಮಾಡಿರುವ ಸಮಯಕ್ಕೆ ಚಾಸಾ 13 ರವರು ಇರಲಿಲ್ಲ ಎಂದರೆ ಸರಿ. ನಿಪಿ-8 ರ ಸಂಗತಿಗಳು ಪೋಲಿಸರು ನನಗೆ ಓದಿ ಹೇಳಿಲ್ಲ ಎಂದರೆ ಸರಿ. ಯಾವ ಪ್ರಕರಣಕ್ಕೆ ಸಂಬಂದಪಟ್ಟಂತೆ ಒಡಣಿಯನ್ನು ತೆಗೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ಪ್ರಕರಣದ ಬಗ್ಗೆ ನನಗೆ ಬೆರೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**